ಶ್ರೀ ಬಿ. ಭಾಸ್ಕರಶೆಟ್ಟಿ.—ಆಯುರ್ವೇದ ಬೋರ್ಡ್‌ನಲ್ಲಿ ಎಷ್ಟು ಜನ ಸದಸ್ಯರಿದ್ದಾರೆ? ಸದಸ್ಯರು ಆಗಬೇಕಾದಲ್ಲಿ ಸದಸ್ಯರ ಅರ್ಹತೆಗಳು ಯಾವು ಯಾವುವು?

ಶ್ರೀ ಕೆ. ನಾಗಪ್ಪ ಆಳ್ವ.—ಸದಸ್ಯರ ಅರ್ಹತೆಗಳು ರಿಜಿಸ್ಟ್ರೇಷ್ ಆಗಲಿಕ್ಕೆ ಯಾವ ಅರ್ಹತೆ ಬೇಕೋ ಅಂತಹ ಅರ್ಹತೆ ಅವರಲ್ಲಿದೆ.

Sri G. P. SARVESH.—May I know the names of the Members of the Board?

ಶ್ರೀ ಕೆ. ನಾಗಪ್ಪ ಆಳ್ವ.—ಡಾ. ಎನ್. ಗುಂಡಪ್ಪ, ಡಾ. ಎಂ. ಗೋಪಾಲಕೃಷ್ಣರಾವ್, ವೈದ್ಯ ಜಿ. ಪುರಾಣಿಕ್.

Mr. SPEAKER.—Have not these names appeared in the Gazette?

Sri K. NAGAPPA ALVA.—Yes.

Mr. SPEAKER.—Then reference to the Gazette may be given. The time consumed for giving such information is more important and cannot be utilised like that.

ಶ್ರೀ ಬಿ. ಎಲ್. ಗೌಡ.—ಗ್ರಾಮಾಂತರ ಪ್ರದೇಶದಲ್ಲಿ ಆಯುರ್ವೇದ ವೈದ್ಯರು, ಹಕೀಮರು, ನರಿಯಾಗಿ ಜನಗಳಿಗೆ ಔಷಧಿ ಕೊಡದೇ ಅವರ ಆರೋಗ್ಯ ಕೆಡುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ? ಇದನ್ನು ನಿಲ್ಲಿಸುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಕೆ. ನಾಗಪ್ಪ ಆಳ್ವ.—ಅಂತಹ ವಿಷಯ ನಮ್ಮ ಗಮನಕ್ಕೆ ಬಂದರೆ ಕಾರ್ಯಕ್ರಮ ತೆಗೆದುಕೊಳ್ಳಬಹುದು.

ಶ್ರೀ ಭಾಸ್ಕರ ಶೆಟ್ಟಿ.—ಬೋರ್ಡ್ ರಚನೆ ಆಗಿರುವ ಉದ್ದೇಶವೇನು?

ಶ್ರೀ ಕೆ. ನಾಗಪ್ಪ ಆಳ್ವ.—ಅದೆಲ್ಲಾ ಪಬ್ಲಿಷ್ ಆಗಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಸರ್ಕಾರದವರ ಗಮನಕ್ಕೆ ತಂದರೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ. ಮುಕ್ಕಾಲು ಭಾಗ ಹಾಗೆ ಆದರೆ ಸರ್ಕಾರದವರ ಗಮನಕ್ಕೆ ಯಾವ ರೀತಿ ಬರಬೇಕು. ಅದನ್ನು ಕಂಡು ಹಿಡಿಯುವುದಕ್ಕೆ ಪ್ರಯತ್ನ ಮಾಡಿದ್ದೀರಾ?

ಶ್ರೀ ಕೆ. ನಾಗಪ್ಪ ಆಳ್ವ.—ತಮ್ಮಂತಹ ಜವಾಬ್ದಾರಿ ವ್ಯಕ್ತಿಗಳು ಈ ವಿಷಯ ತಿಳಿಸಿದರೆ ಕಾರ್ಯಕ್ರಮ ತೆಗೆದುಕೊಳ್ಳಬಹುದು.

Extent of Land irrigated in Krishnarajpet Taluk

*Q.—62. Sri N. NANJEGOWDA (Krishnarajpet).—

Will the Government be pleased to state:—

(*a*) the average number of acres of wet land that is being irrigated per cusec of Water under the Mandagere North and South Channels and Hemagiri channels in Krishnarajpet Taluk (Channelwar details may be furnished);

(*b*) the average number of acres of land that is being irrigated per cusec of water under the Visveswarayya Canal;

(*c*) the steps that are taken to increase the extent of land that is irrigated under channels in Krishnarajpet Taluk where the extent of land irrigated is less?

A.—Sri ALUR HANUMANTHAPPA (Deputy Minister for Minor Irrigation).—

(*a*) (i) Mandageri Right Bank (South) channel—24 acres per cusec.

(ii) Mandageri left (North)—22 acres per cusec.

(iii) Hemagiri channel—20½ acres per cusec.

(*b*) 50 acres per cusec.

(*c*) Necessary steps are being taken to extend irrigation under the channels to the extent possible by providing controlling arrangements and attending to remaining obstructions as and when required.

ಶ್ರೀ ಎನ್. ನಂಜೇಗೌಡ.—ಸ್ವಾಮಿ, ಮುಂದಗೆರೆ ಬಲದಂಡೆಯಲ್ಲಿ ಮತ್ತು ಹೇಮಗಿರಿ ನಾಲಾ ಕೆಳಗೆ ಕ್ಯೂಸೆಕ್ ಒಂದಕ್ಕೆ 22 ಎಕರೆಗಳು ಮತ್ತು 20½ ಎಕರೆಗಳು ನೀಲಾವರಿ ಆಗುತ್ತದೆಂದು ಹೇಳಿದ್ದೀರಿ ? ವಿಶ್ವೇಶ್ವರಯ್ಯ ನಾಲಾ ಕೆಳಗೆ 50 ಎಕರೆ ನೀರಾವರಿಯಾಗುತ್ತದೆ. ಇಲ್ಲಿ ಇಷ್ಟು ಕಡಿಮೆ ಬರಲು ಕಾರಣವೇನು ?

†ಶ್ರೀ ಆಲೂರು ಹನುಮಂತಪ್ಪ.—ಚಾನರ್ ಬಹುಮಟ್ಟಿಗೆ ರಿಪೇರಿ ಆಗಬೇಕಾಗಿರುವುದರಿಂದ ಕಂಟ್ರೋಲಿಂಗ್ ಅರೇಂಜ್‌ಮೆಂಟ್ಸ್ ಇಲ್ಲದೇ ಇರುವುದರಿಂದ ಅಷ್ಟು ಕಡಿಮೆ ಬಂದಿದೆ.

ಶ್ರೀ ಎನ್. ನಂಜೇಗೌಡ.—ನಿಯಂತ್ರಿತ ವ್ಯವಸ್ಥೆಗಳನ್ನು ಕೈಗೊಂಡಿದ್ದೇವೆ ಎಂದು ಹೇಳುತ್ತಿದ್ದೀರಿ ? ಏನು ವ್ಯವಸ್ಥೆ ಕೈಕೊಂಡಿದ್ದೀರಿ ?

Sri ALUR HANUMANTHAPPA.—Repairing channels, removing obstructions and also controlling arrangements have been undertaken.

Mr. SPEAKER.—It is stated that necessary steps are being taken.

ಶ್ರೀ ಎನ್. ನಂಜೇಗೌಡ.—ಈಗ ಆಹಾರದ ಅಭಾವವಿರುವಾಗ ನೀರು ಪೋಲಾಗುವುದನ್ನು ತಪ್ಪಿಸಿ ಹೆಚ್ಚು ಆಹಾರ ಬೆಳೆಯಲು ಅನುಕೂಲವಾಗುವಂತೆ ಏನು ಕ್ರಮ ಕೈಗೊಳ್ಳುತ್ತೀರಿ ?

(ಉತ್ತರವಿಲ್ಲ)

Industries managed by Goverament

*Q.—67. Sri T. MADIAH GOWDA (Ramanagaram).—

Will the Government be pleased to state :—

(*a*) which are the Industries that are directly managed by them ;

(*b*) (i) the capital invested ;

(ii) the net profit or loss ;

(iii) percentage of profit to the total invested capital and establishment charges in each of these concerns for the last 3 years ;

(*c*) which are all the industries in which Government own shares ;

(*d*) the number of shares owned by the Government and the dividend earned by the Government in each of these Ltd. Companies Industries for the last 3 years in each year ?

*A.—Sri S. NIJALINGAPPA [On behelf of Sri K. Mallappa (Minister for Industries and Commerce)].—

(*a*) and (*b*) *Vide* statement 'A' appended.

(*c*) and (*d*) *Vide* statement 'B' appended.